ಬೆಂಗಳೂರು ಪ್ರಾಧಿಕಾರಿಗಳಿಗೆ ಒಳಪಟ್ಟಿರುವ ೨೨ ಗ್ರಾಮ ಹಾಗೂ ಯಲಹಂಕ ಪುರಸಭೆಗಳಿಗೆ ಕಾವೇರಿ ನೀರನ್ನು ಒದಗಿಸುವುದು

೨೬೨ (೨೮೭) ಶ್ರೀ ವಿ. ಶ್ರೀನಿವಾಸನ್ (ಯಲಹಂಕ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(೧) ತಾರೀಖು ೮-೫-೮೩ರಲ್ಲಿಯು ಯಲಹಂಕ ಕ್ಷೇತ್ರದ ೨೨ ಹಳ್ಳಿಗಳಿಗೆ ಕಾವೇರಿ ನೀರನ್ನು ಒದಗಿಸಲಾಗುವುದೆಂದು ಮಂತ್ರಿಗಳು ಭರವಸೆ ಕೊಟ್ಟಿದ್ದರೂ ಸಹ ನೀರನ್ನು ಒದಗಿಸದಿರುವ ಕಾರಣಗಳೇನು ?

(೨) ಈ ಭರವಸೆಯು ಮೇರೆಗೆ ಯಾವಾಗ ನೀರನ್ನು ಒದಗಿಸಲಾಗುವುದು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು).—

ಈ ಕೆಳಕಂಡ ಹಳ್ಳಿಗೆ ನೀರು ಸರಬರಾಜು ಮಾಡುವ ಬಗ್ಗೆ ಕೋರಿಕೆಗಳು ಬಂದಿದ್ದು ಅದಕ್ಕೆ ಸಂಬಂಧಿಸಿದ ವಿವರಗಳನ್ನು ಕೆಳಗೆ ಪರಾಂಬರಿಸಲಾಗಿದೆ.

(೧) ಯಲಹಂಕ ಪಟ್ಟಣ : ಈ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಬಗ್ಗೆ ಯಲಹಂಕ ಪುರಸಭೆಯ ಅಧ್ಯಕ್ಷರಿಂದ ಕೋರಿಕೆಯು ಬಂದಿದ್ದು ೨೪ ಲಕ್ಷ ರೂ.ಗಳ ಅಂದಾಜು ವೆಚ್ಚವನ್ನು ಮೇಲು ರುಜು ಮತ್ತು ಹಣ ಸಂದಾಯಕ್ಕೆ ಕಳುಹಿಸಿಕೊಡಲಾಗಿತ್ತು. ಮೇಲು ರುಜು ಮಾಡಿದ ಅಂದಾಜನ್ನು ತಾರೀಖು ೪-೧೨-೮೨ರಂದು ವಾಪಸ್ಸು ಬಂದಿರುತ್ತೆ ಅಂದಾಜು ವೆಚ್ಚದ ಹಣವು ಇನ್ನೂ ಸಂದಾಯವಾಗಿರುವುದಿಲ್ಲ.

(೨) ಹೆಬ್ಬಾಳ ಗ್ರಾಮ : ಈ ಗ್ರಾಮದ ಪಂಚಾಯಿತಿ ಅಧ್ಯಕ್ಷರಿಂದ ತಾರೀಖು ೩೦-೬-೮೩ರಂದು ಅಂದಾಜನ್ನು ತಯಾರಿಸಲು ಕೋರಿಕೆ ಬಂದಿರುತ್ತೆ. ಇದಕ್ಕೆ ಅವಶ್ಯಕವಾದ ಅಂದಾಜನ್ನು ಶೀಘ್ರದಲ್ಲೇ ತಯಾರಿಸಿ ಕಳುಹಿಸಿಕೊಡಲಾಗುವುದು.

(೩) ಲಿಂಗರಾಜಪುರಂ : ಕಾರ್ಯ ನಿರ್ವಾಹಕ ಸಹಾಯಕ ಅಭಿಯಂತರರು ನಂ. ೨ ಬಿಡಿಎ ಇವರಿಂದ ಕೋರಿಕೆಯು ಬಂದಿದ್ದು ತಾರೀಖು ೩೧-೧೨-೮೨ ರಂದು ೭.೫೯ ಲಕ್ಷದ ಅಂದಾಜು ವೆಚ್ಚವನ್ನು ಮೇಲೆ ರುಜು ಮತ್ತು ಹಣ ಸಂದಾಯಕ್ಕೆ ಕಳುಹಿಸಿಕೊಡಲಾಗಿದೆ.

(೪) ದೇವರ ಜೀವನಹಳ್ಳಿ : ಕಾರ್ಯನಿರ್ವಾಹಕ ಅಭಿಯಂತರರು ಉತ್ತರ ವಿಭಾಗ ಬಿಡಿಎ ಇವರಿಂದ ತಾರೀಖು ೧೭-೮-೮೧ರಂದು ಕೋರಿಕೆಯು ಬಂದಿದ್ದು ರೂ. ೬೪.೪೮ ಲಕ್ಷದ ಅಂದಾಜು ವೆಚ್ಚವನ್ನು ತಾರೀಖು ೨-೨-೮೩ರಂದು ಬಿಡಿಎಗೆ ಮೇಲು ರುಜು ಮತ್ತು ಹಣ ಸಂದಾಯಕ್ಕೆ ಕಳುಹಿಸಿಕೊಡಲಾಗಿದೆ.

(೫) ನಾಗಶೆಟ್ಟಿಹಳ್ಳಿ, ಗೆದ್ದಲ ಹಳ್ಳಿ, ಅಶ್ವತ್ಥನಗರ, ಬೂಸಂದ್ರ ಹಳ್ಳಿಗಳು : ರೂ. ೧೭.೦೪ ಲಕ್ಷದ ಅಂದಾಜು ವೆಚ್ಚವನ್ನು ತಯಾರಿಸಲಾಗಿದ್ದು ಅತಿ ಶೀಘ್ರದಲ್ಲಿ ಮೇಲು ರುಜು ಮತ್ತು ಹಣ ಪಾವತಿಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಲಾಗುವುದು.

(೬) ಮಲ್ಲಸಂದ್ರ ಮತ್ತು ಹೆಸರಘಟ್ಟ : ಈ ಹಳ್ಳಿಗಳಿಗೆ ಈಗಾಗಲೇ ನೀರನ್ನು ಒದಗಿಸಲಾಗಿದೆ.

ಉಳಿದ ಯಲಹಂಕ ಕ್ಷೇತ್ರದ ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ಬಗ್ಗೆ ಯಾವ ಕೋರಿಕೆಯೂ ಬಂದಿರುವುದಿಲ್ಲ.

ಮೇಲ್ಕಂಡ ಹಳ್ಳಿಗಳಿಗೆ ಮೇಲು ರುಜು ಮಾಡಿದ ಅಂದಾಜು ಮತ್ತು ಅಂದಾಜು ವೆಚ್ಚದ ಹಣವನ್ನು ಬೆಂಗಳೂರು ಜಲಮಂಡಳಿಗೆ ಕಳುಹಿಸಿಕೊಟ್ಟ ನಂತರ ನೀರನ್ನು ಒದಗಿಸಲಾಗುವುದು.